

ವೈ.ಸಿ. ಭಾನುಮತಿ ಮತ್ತು ಪತಿ ಯು.ಎಸ್. ರಾಮಣ್ಣ

ಶಿಖರ ಎನ್ನುತ್ತೇವೆ. ಇದು ಎಲ್ಲರೂ ಒಪ್ಪುವಂಥದ್ದೆ. ಆದರೆ, ಅದೇ ಹೊತ್ತಿನಲ್ಲಿ ಅವರ ಸಹಪಾಠಿ ಡಿ.ಎಲ್. ನರಸಿಂಹಾಚಾರ್ಯರು ಮಾಡಿದ ಕಾರ್ಯ ಮೌಲಿಕವಲ್ಲವೇ? ಹಸ್ತಪ್ರತಿಗಳಲ್ಲಿ ನಿಕ್ಷಿಪ್ತವಾಗಿರುವ ಗ್ರಂಥಗಳು ಆ ಕಾಲದ ಸಾಹಿತ್ಯಿಕ, ಸಾಂಸ್ಕೃತಿಕ, ಧಾರ್ಮಿಕ, ಚಾರಿತ್ರಿಕ ಅಧ್ಯಯನಕ್ಕೆ ಆಕರಗಳಾಗುತ್ತವೆ. ಸಾಹಿತ್ಯಚರಿತ್ರೆ ನಿರ್ಮಾಣ ಮಾಡುವಾಗ ಇಂಥ ಸೃಜನೇತರ ಕಾರ್ಯಗಳು ಅನಿವಾರ್ಯವೆನಿಸುವುದಿಲ್ಲವೇ?

◆ **ನೀವು ಸಂಪಾದಿಸಿದ ಕೃತಿಗಳನ್ನು ಆಕರವಾಗಿ ಬಳಸಿಕೊಂಡು ಎಲ್ಲೆಲ್ಲಿ ಯಾವ ರೀತಿಯ ಸಂಶೋಧನೆಗಳು ಆಗಿವೆ ಮತ್ತು ವ್ಯಾಖ್ಯಾನಗಳು ಬದಲಾಗಿವೆ? ಒಂದೆರಡನ್ನು ಹೇಳಬಹುದೆ?**

ನಾನು ಸಂಪಾದಿಸಿದ 'ಸೌಂದರಕಾವ್ಯ' ಎಂಬ ಚಾರಿತ್ರಿಕ ಕಾವ್ಯವನ್ನು ಕಳಲೆ ನಂಜರಾಜನ ಮೇಲೆ ನಡೆದ ಇತಿಹಾಸ ಸಂಶೋಧನೆಗೆ ಆಕರವಾಗಿ ಬಳಸಿಕೊಳ್ಳಲಾಗಿದೆ. ಸಹ್ಯಾದ್ರಿ ಖಂಡದಲ್ಲಿ ಬರುವ ತೀರ್ಥಕ್ಷೇತ್ರಗಳ ಮಾಹಿತಿಯನ್ನು ಕಿರು ಪ್ರಬಂಧಗಳಲ್ಲಿ (ಡಿಸರ್ಟೇಶನ್) ಉಪಯೋಗಿಸಿಕೊಳ್ಳಲಾಗಿದೆ. 'ಭೈರವೇಶ್ವರ ಪುರಾಣ'ವನ್ನು ಪಿಎಚ್.ಡಿ. ಅಧ್ಯಯನಕ್ಕೆ ಆಕರ ಸಾಮಗ್ರಿಯಾಗಿ ಸ್ವೀಕರಿಸಲಾಗಿದೆ. ಹೀಗೆ ಅಲ್ಲಲ್ಲಿ ನಡೆಯುತ್ತಿರುತ್ತದೆ. ನಾವು ಸಿದ್ಧಪಡಿಸುವ ಗ್ರಂಥಗಳು ಸಂಶೋಧನೆಗೆ ಉಪಯೋಗವಾಗುತ್ತಿರುತ್ತವೆ. ಬೆಳಕಿಗೆ ಬರುವುದಿಲ್ಲವಷ್ಟೆ.

◆ **ನಿಮ್ಮ ಬದುಕಿನ ಅವಿಸ್ಮರಣೀಯ ಘಟನೆ ಅಥವಾ ವ್ಯಕ್ತಿಯ ಕುರಿತು ಹೇಳಿ.**

ನಮ್ಮ ಭಂಡಾರದಲ್ಲಿರುವ ವಿವಿಧ ಹಸ್ತಪ್ರತಿಗಳು, ಅವುಗಳ ಸ್ಥಿತಿಗತಿಗಳನ್ನು ಗಮನಿಸಿಕೊಂಡೇ